ನನ್ನ ಪ್ರೀತಿಯ ಪುರ್ವೀತ್,

ವರ್ಷಗಳೇ ಕಳೆದುಹೋಗಿವೆ – ಇಷ್ಟು ದೊಡ್ಡ ಇ–ಮೇಲನ್ನು ಬರೆಯದೆ.

ಇದೇ ಜುಲೈ ತಿಂಗಳ ಮೊದಲನೇ ದಿನ; ಹೀಗೇ ಧಾರಾಕಾರ ಮಳೆ... ನನ್ನ ಮಧು, ತನ್ನ ಬದುಕು–ಸಾವಿನ ನಡುವೆ ತೊಳಲಾಡುತ್ತಿದ್ದ. ನಾನು ನಿನಗೆ ಒಂದೇ ಉಸಿರಿನಲ್ಲಿ ಮೇಲ್ ಕಳಿಸಿ ಅಳುತ್ತ ಕುಳಿತಿದ್ದೆ. 'ಮಧುವಿನ ಜೀವಕ್ಕೆ ಏನಾದರು ಆದರೆ ನಾನು ಉಳಿಯುವುದಿಲ್ಲ; ನನ್ನ ಇಬ್ಬರೂ ಮಕ್ಕಳನ್ನು ನಿನ್ನ ಮಡಿಲಿಗೆ ಹಾಕಿದ್ದೇನೆ.' ಕ್ಷಣದ್ದಲಿಯೇ ಬಂದಿತ್ತು ನಿನ್ನ ಉತ್ತರ – ಬರೀ ಮೂರು ವಾಕ್ಯಗಳ ಮೇಲು, ಎಷ್ಟು ಚಿಕ್ಕದಾಗಿತ್ತೋ ಅಷ್ಟೇ ದೊಡ್ಡ ಭರವಸೆಯದಾಗಿತ್ತು – 'ಯಾರೂ ಯಾರೊಬ್ಬರಿಗಾಗಿ ಹುಟ್ಟಿರುವುದಿಲ್ಲ; ಕಾಲು ಕುಸಿದರೆ ನೆಲವಿದೆ; ದೇಶ ಕಾಲಗಳು ಅಪರಿಮಿತವಾಗಿವೆ.' ಆವತ್ತು ಎಷ್ಟು ಅರ್ಥವಾಯಿತೋ ಗೊತ್ತಿಲ್ಲ, ಆದರೆ ಇವತ್ತಿನವರೆಗೂ ಆ ಮಾತುಗಳು ಅರ್ಥವನ್ನು ತೆರೆದುಕೊಳ್ಳುತ್ತಾ ನನ್ನನ್ನು ಪೊರೆಯುತ್ತಿವೆ. ನೀನು ಬರುವಷ್ಟರಲ್ಲಿ ನಾನು ಆಂಬುಲೆನ್ಸ್‌ನಲ್ಲಿ ಮಧುಕರನ ಶವದ ಪಕ್ಕದಲ್ಲಿ ಮುಖಕ್ಕೆ ವೇಲು ಮುಚ್ಚಿಕೊಂಡು ಕುಳಿತಿದ್ದೆ. ನಿನ್ನ ಕಾರು ಅದರ ಹಿಂದೆಯೇ ಬಂತು; ಧೃತಿ ನಿನ್ನ ಪಕ್ಕದಲ್ಲಿ, ಎದುರು ಸೀಟಿನಲ್ಲಿ – ಅವಳ ತೊಡೆಯ ಮೇಲೆ ನನ್ನ ಪುಟಾಣಿ ಶ್ರುತಿ! ಅಷ್ಟೇ... ಮತ್ತೆಲ್ಲವೂ ಮಸುಕು ಮಸುಕು... ಮನೆಯಲ್ಲಿ ಅತ್ತೆ–ಮಾವ, ಮೈದುನ–ಅತ್ತಿಗೆ, ನೆರೆಹೊರೆ... ಮಳೆಯೋ ಮಳೆ...

ಆಮೇಲಿನ ಎಷ್ಟೊಂದು ಕಿರಿ ಕಿರಿಯ ಆಚರಣೆಗಳಲ್ಲಿ ಎಲ್ಲೆಲ್ಲೂ ನೀನೇ! ನಾನು ಇದ್ದೆ–ಇರಲಿಲ್ಲ.

ನನ್ನ ತಮ್ಮನೋ, ಮೈದುನನೋ, ಯಾರು ಯಾವಾಗ ಏನು ಹೇಳಿದರೋ ಗೊತ್ತಿಲ್ಲ – ಇದ್ದಕ್ಕಿದ್ದಂತೆ ನೀನು ನಾಪತ್ತೆ! ಧೃತಿ ನನ್ನನ್ನು ಕೇಳುತ್ತಲೇ ಇದ್ದಳು – 'ಅಮ್ಮ, ಮಾಷ್ಟ್ರು ಯಾಕಮ್ಮ ಬರ್ತಾ ಇಲ್ಲ?' ನಾನು ರೇಗಿ ಹೇಳಿದ್ದೆ – 'ನಂಗೇನೇ ಗೊತ್ತು, ನಾಳೆ ಸ್ಕೂಲಲ್ಲಿ ಸಿಗ್ತಾರಲ್ಲ? – ನೀನೇ ಕೇಳು'. ಅನಂತರದ ಎಷ್ಟೋ ದಿನಗಳಲ್ಲಿ ನಾನು ನಿನ್ನ ಬಿಡುವಿನ ಬಗ್ಗೆ ಕೇಳಿದಾಗಲೆಲ್ಲ ಏನೋ ನೆವ ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ನಾನು ಅದನ್ನು ಅರ್ಥ ಮಾಡಿಕೊಂಡೆ: ನೀನು ನನ್ನನ್ನು ನಿನ್ನ ಸ್ವಂತ ಕಣ್ಣುಗಳಿಂದ ನೋಡಲಾರೆ, ನಾನು ಹಿಂದಿನ ಶ್ರೀಮತಿ ಅನು ಮಧುಕರ್ ಅಲ್ಲ! ನೀನು ಬಾಯಿಬಿಟ್ಟು ಹೇಳದಿದ್ದರೂ ನನಗೆ ಅರ್ಥವಾಗದೆ?

ಹೀಗೆ ದಿನಗಳು ಹೇಗೋ ಕಳೆದು ವರ್ಷವಾಯಿತು. ಮಧುವಿನ ವರ್ಷಾಂತಿಕಕ್ಕೆ ಬರುತ್ತೀಯಲ್ಲವೇ ಎಂದು ಮೆಸೇಜು ಹಾಕಿದೆ. ನಿನ್ನಿಂದ ಮೂರೇ ಪದದ ಉತ್ತರ – 'ಸಿಹಿಯೂಟ ಸಂಕಟವೆನ್ನಿಸುತ್ತದೆ – ಕ್ಷಮಿಸು.' ಅಂತೂ ನನ್ನೊಬ್ಬಳ ಸಂಕಟದಲ್ಲಿ ಎಲ್ಲವೂ ಮುಗಿಯಿತು. ಆಮೇಲೆ ಯಾಕೊ ನಿನ್ನ ಹತ್ತಿರ ಒಂದು ಮಾತನ್ನು ಕೇಳಿ ಉತ್ತರ ಪಡೆಯಲೇಬೇಕೆನಿಸಿತು. 'ಕಾಲು ಕುಸಿದರೆ ನೆಲವಿದೆ' – ಎಂದವನು ನೀನಲ್ಲವೇ? ನಾನೇ ಕುಸಿಯುತ್ತಿದ್ದೇನೆ, ಎಲ್ಲಿ ನೀನು, ಪುರ್ವೀತ್ ಎಂದರೆ 'ನೆಲ' ಎಂದು ನಂಬಿಸಿದವನು? ನಾನು ಒಂದು ದಿನ ನಿನ್ನ ಶಾಲೆಗೇ ಬಂದು, ಹಟ ಹಿಡಿದು ದೂರದ ಮಲ್ಲೇಶ್ವರದ ಗುಡಿಗೆ ಕರೆದುಕೊಂಡು ಹೋದೆ. ಪುರ್ವಿ, ನಿನ್ನಿಂದ ನನಗೆ ಏನೂ ಬೇಡ – ನೀನು ಬರೀ ಬೆನ್ನಿಗಿರು – ಆ ಭರವಸೆಯಲ್ಲಿ ಹೇಗೋ ಬದುಕುತ್ತೇನೆ – ಭಾಷೆ ಕೊಡು ಎಂದೆ. ಆ ಕಲ್ಲುಗುಡಿಯ ಕಟ್ಟೆಯ ಮೇಲೆ ನೀನು ಕರಗಿಹೋದೆ! ನಿನ್ನ ಇತಿ–ಮಿತಿಯನ್ನು (ಅವೆಲ್ಲವೂ ನನಗೆ ಗೊತ್ತಿರುವುದೇ) ಹೇಳುತ್ತಾ ಕೊನೆಗೆ, ಬಿಗಿಯಾಗಿ ಅಪ್ಪಿಕೊಂಡು ಭಾಷೆ ಕೊಟ್ಟೆ –

'ಅನು, ಯಾರು ಏನೇ ಹೇಳಲಿ, ಈ ಕ್ಷಣದಿಂದ ನಿನ್ನ ಮಕ್ಕಳು ನನ್ನ ಮಕ್ಕಳು, ನಾವಿಬ್ಬರೂ ಜೀವದ